Surcharge proceedings have been instituted and some of the share-holders are being proceeded against.

Dr. R. NAGAN GOWDA.—May I know whether there is an officer known as the Liquidation of Societies Officer in the State Co-operative Department who takes charge of such societies?

Sri S. NIJALINGAPPA.—It is that officer who is in charge of the Tumkur Society.

ಶ್ರೀ ಕೆ. ಎರ್. ನರಸಿಂಹಯ್ಯ.—ಈ ಸೊಸೈಟಿಗಳಲ್ಲಿ ಲಿಮಿಟೆಡ್ದು ಎಷ್ಟು ಮತ್ತು ಅನ್‌ಲಿಮಿಟೆಡ್ದು ಎಷ್ಟು?

ಅಧ್ಯಕ್ಷರು.—ಉತ್ತರ ಆಗಲೇ ಹೇಳಿದ್ದಾರೆ.

Sri G. B. SHANKAR RAO.—Supplementary to (*c*): May I know whether the amounts of share-holders were fully refunded or only rateable distribution was made?

Sri S. NIJALINGAPPA.—In the case of one society, namely, the Kesthur Sri Dhanalakshmi Co-operative Society, it has been fully paid. In the case of others, the amount has not been fully paid.

Extension of Concessions given to Depressed Class to Scheduled Caste

Q.—2324. Sri M. M. J. SADYOJATHAPPAIAH (Harapanahalli).—

Will the Government be pleased to state:—

whether all the concessions given to Depressed Class people are extended to Scheduled Class people also?

A.—Sri R. CHENNIGARAMAIAH (Minister for Local Self-Government):—

Yes.

Sri M. K. BOMME GOWDA.—What is the difference between Scheduled Castes and Depressed Classes?

*Sri R. CHENNIGARAMAIAH.—In the former Mysore State they were called Depressed Classes and subsequently they were termed as Scheduled Castes. In the whole of India they are known as Scheduled Castes.

Sri C. J. MUCKANNAPPA.—What are those concessions referred to in the question?

Sri R. CHENNIGARAMAIAH.—There is a Government order in that behalf. There are a number of concessions with regard to education, house construction, sinking of wells, construction of hostels, etc.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕಾಡು ಗೊಲ್ಲರನ್ನು ಈ ಷೆಡ್ಯೂಲು ಕ್ಯಾಸ್ ಪಂಗಡಕ್ಕೆ ಸೇರಿಸಿದ್ದೀರಾ?

ಶ್ರೀ ಆರ್. ಚೆನ್ನಿಗರಾಮಯ್ಯ.—ಈ ಪಂಗಡ ಸೇರಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇನ್ನು ಯಾವ ಯಾವ ಪಂಗಡಗಳು ಸೇರಿವೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಯಾವ ಯಾವ ಪಂಗಡಗಳು ಸೇರಿವೆ ಎನ್ನುವುದು ಪ್ರಸಿಡೆಂಟರಿಂದ ನಿರ್ಧಾರವಾಗತಕ್ಕ ವಿಚಾರ. ಅದು ನಮಗೆ ಸೇರಿದ್ದಲ್ಲ.

ಅಧ್ಯಕ್ಷರು.—ಈ ಪ್ರಶ್ನೆ ಇಲ್ಲಿ ಬರುವುದಿಲ್ಲ.

Sri J. P. SARWESH.—Is there any difference between the Hyderabad Scheduled Caste list and the old Mysore Scheduled Caste list?

Sri R. CHENNIGARAMAIAH.—There is difference in name.

Construction of a Bridge on the Suvarnavathi River on the Way to Biligiri Rangaswamy Betta.

Q.—2436. Srimathi KEMPAMMA (Kollegal).—

Will the Government be pleased to state:—

(*a*) whether it is a fact that they propose to construct a bridge across Suvarnavathi river on the road from Yelandur to Biligiri Rangaswamy Betta;

(*b*) if so, when?

A.—Sri H. K. VEERANNA GOWDH (Minister for Public Works).—

(*a*) Yes.

(*b*) The tenders received in respect of the work are under examination and the work will be taken up soon after the contract is fixed.

ಶ್ರೀಮತಿ ಕೆಂಪಮ್ಮ.—ಈ ಕಾಮಗಾರಿಯ ಸಂಬಂಧವಾಗಿ ಬಂದಿರುವ ಟೆಂಡರುಗಳೆಷ್ಟು?

*ಶ್ರೀ ಎಚ್. ಕೆ. ವೀರಣ್ಣಗೌಡ.—ಎರಡು ಟೆಂಡರುಗಳು ಬಂದವು.

ಶ್ರೀಮತಿ ಕೆಂಪಮ್ಮ.—ಟೆಂಡರುಗಳು ಬಂದ ತಾರೀಖು ಯಾವುದು?

ಶ್ರೀ ಎಚ್. ಕೆ. ವೀರಣ್ಣಗೌಡ.—1957ನೆ ಇಸವಿಯ ಆಖ್ಯೆರು ಭಾಗದಲ್ಲಿ ಬಂದಿವೆ.

ಶ್ರೀಮತಿ ಕೆಂಪಮ್ಮ.—ಕಂಟ್ರಾಕ್ಟರನ್ನು ಗೊತ್ತು ಪಡಿಸಿ ಸೇತುವೆ ಕೆಲಸವನ್ನು ಎಷ್ಟು ದಿವಸಗಳಲ್ಲಿ ಮಾಡಿ ಮುಗಿಸುತ್ತೀರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ಕಂಟ್ರಾಕ್ಟರನ್ನು ಗೊತ್ತು ಮಾಡುವುದರಲ್ಲಿ ಸ್ವಲ್ಪ ತೊಂದರೆಯಾಗಿದೆ, ನಾನಾಗಲೇ ಹೇಳಿದಂತೆ ಎರಡು ಟೆಂಡರುಗಳು ಮಾತ್ರ ಬಂದವು. ಈ ಎರಡರ ಪೈಕಿ ಅತ್ಯಂತ ಕಡಮೆ ಇದ್ದದ್ದು ನವ್ಯ ಷೆಡ್ಯೂಲು ರೇಟಿಗಿಂತ ಶೇಕಡ 20ರಷ್ಟು ಜಾಸ್ತಿ ಇತ್ತು. ಎರಡರ ಪೈಕಿ ಕಡಮೆಯಾಗಿರುವ ಟೆಂಡರನ್ನು ಒಪ್ಪಿಕೊಳ್ಳ ಬೇಕೆಂದು ಚೀಫ್ ಇಂಜಿನಿಯರು ಸರ್ಕಾರಕ್ಕೆ ಕಳುಹಿಸಿದರು. ಶೇಕಡ 20ರಷ್ಟು ಜಾಸ್ತಿ ಕೊಡುವುದು ಸೂಕ್ತ ಕಾಣುವುದಿಲ್ಲವೆಂದು ಭಾವಿಸಲಾಯಿತು. ಪಕ್ಕದ ಕೊಳ್ಳೆಗಾಲ ತಾಲ್ಲೂಕಿನಲ್ಲಿ ಉಡುತೊರೆ ಸಮೀಪದಲ್ಲಿ ಶೇಕಡ ಏಳರಷ್ಟು ಮಾತ್ರ ಷೆಡ್ಯೂಲ್ ರೇಟಿಗಿಂತ ಜಾಸ್ತಿ ಕೊಟ್ಟಿದ್ದು. ಪಕ್ಕದಲ್ಲಿಯೇ ಶೇಕಡ 20ರಷ್ಟು ಜಾಸ್ತಿ ಕೊಡುವುದು ಸೂಕ್ತವಲ್ಲ, ಬೇರೆ ಟೆಂಡರು ಏಕೆ ಕರೆಯಬಾರದು, ಅಥವಾ ಇದೇ ಟೆಂಡರು ದಾರರೇ ಕಡಮೆ ರೇಟಿಗೆ ಮಾಡುತ್ತೇನೆಂದು ಒಪ್ಪಿಕೊಳ್ಳುತ್ತಾರೆಯೇ ಹೇಗೆ ಎಂದು ಚೀಫ್ ಇಂಜಿನಿಯರಿಗೆ ಫೆಬ್ರವರಿ ತಿಂಗಳು 22ನೆಯ ತಾರೀಖು ಹಿಂದಕ್ಕೆ ಕಳುಹಿಸಿದ್ದೇವೆ. ಅವರಿಂದ ಉತ್ತರ ಬರಬೇಕಾಗಿದೆ. ಅವರಿಂದ ಉತ್ತರ ಬಂದ ಕೂಡಲೇ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. 1957-58ರ ಬಜೆಟ್ಟಿನಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಟೆಂಡರು ತೊಂದರೆಯಿಂದ ಹಣವನ್ನು ಖರ್ಚು ಮಾಡುವುದಕ್ಕಾಗಲಿಲ್ಲ. ಈ ವರ್ಷ ಎರಡು ಲಕ್ಷ ರೂಪಾಯಿ ತೆಗೆದಿಟ್ಟಿದ್ದೇವೆ.

Sri U. M. MADAPPA.—On a point of order, Sir. Can a Minister sleep in the House, Sir?

Sri C. J. MUCKANNAPPA.—The Hon'ble the Law Minister is sleeping, Sir.

Sri B. VAIKUNTA BALIGA.—I was fully absorbing all that my friend Sri Muckannappa was saying Sir. (*Laughter*).

ಶ್ರೀ ಬಿ. ಎಸ್. ಬೋರಣ್ಣಗೌಡ.—ಷೆಡ್ಯೂಲ್ ರೇಟಿಗಿಂತ ಟೆಂಡರ್‌ರೇಟು ಶೇಕಡ 20ರಷ್ಟು ಹೆಚ್ಚಾಗಿದೆ ಎಂದು ಹೇಳಿದರು. ಸಿಮೆಂಟು ಮತ್ತು ಕಬ್ಬಿಣದ ಬೆಲೆ ಹೆಚ್ಚಾಗಿರುವುದರಿಂದ ಟೆಂಡರ್‌ರೇಟ್ ಜಾಸ್ತಿ ಕೊಟ್ಟಿದ್ದಾರಲ್ಲವೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಒಂದೊಂದು ಬಾಬಿಗೂ ಯಾವ ರೀತಿ ಹೆಚ್ಚಿಗೆ ಕೊಟ್ಟಿದ್ದಾರೆಂದು ಗೊತ್ತಿಲ್ಲ. ನನಗೆ ಬಂದಿರುವ ರಿಪೋರ್ಟಿನಲ್ಲಿ ಶೇಕಡ 20ರಷ್ಟು ಜಾಸ್ತಿಯಾಗಿ ಟೆಂಡರ್‌ರೇಟ್ ಕೊಟ್ಟಿದ್ದಾರೆ ಎಂದಿದೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಶೇಕಡ 20ರಷ್ಟು ಜಾಸ್ತಿ ರೇಟ್ ಬಂದಿರುವ ಟೆಂಡರುಗಳನ್ನು ಅಪ್ರೂವ್ ಮಾಡಿಲ್ಲವೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಷೆಡ್ಯೂಲ್ ರೇಟನ್ನು ಗೊತ್ತು ಮಾಡುವಾಗ ಕಬ್ಬಿಣ ಸಿಮೆಂಟ್ ಇವುಗಳ ಬೆಲೆ ಏನಿದೆ ಎನ್ನುವುದನ್ನು ನೋಡಿಕೊಂಡು ಮಾಡುತ್ತಾರೆ ಅಲ್ಲವೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸಾಮಾನ್ಯವಾಗಿ ಹಾಗೆ ಮಾಡುತ್ತಾರೆ.

Sri D. DEVARAJ URS.—What difficulty is there for Government to call for tenders again?

ಶ್ರೀ ಎಚ್. ಕೆ. ವೀರಣ್ಣಗೌಡ.—ಸರ್ಕಾರದವರು ಟೆಂಡರು ಕರೆಯುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಕರೆಯುತ್ತಾರೆ. ರೀ-ಟೆಂಡರ್ ಕರೆಯಲು ಏನು ತೊಂದರೆ ಇದೆ ಎಂದು ಕೇಳಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಟೆಂಡರ್ ಕರೆದಿರುವುದು 1957ನೆ ಇಸವಿಯ ಆಖೈರು ಭಾಗದಲ್ಲಿ ಎಂದು ಹೇಳಿದ್ದೀರಿ. ಐದಾರು ತಿಂಗಳೂ ಇದನ್ನು ಇತ್ಯರ್ಥ ಮಾಡದೆ ಇರುವುದಕ್ಕೆ ಕಾರಣವೇನು?

ಶ್ರೀ ಎಚ್. ಕೆ. ವೀರಣ್ಣಗೌಡ.—ಚೀಫ್ ಇಂಜಿನಿಯರು ಟೆಂಡರನ್ನು ಒಪ್ಪಿಕೊಳ್ಳಬೇಕೆಂದು 1958ನೆಯ ಇಸವಿ ಫೆಬ್ರವರಿ ತಿಂಗಳಿನಲ್ಲಿ ಬರೆದರು. ಸರ್ಕಾರದಿಂದ ಟೆಂಡರ್ ರೇಟು ಬಹಳ ಜಾಸ್ತಿಯಾಗಿದೆ. ಬೇರೆ ಟೆಂಡರ್ ಏಕೆ ಕರೆಯಬಾರದೆಂದು ಹಿಂದಕ್ಕೆ ಕಳುಹಿಸಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಎಸ್ಟಿಮೇಟ್ ಯಾವಾಗ ತಯಾರಾಯಿತು?

ಶ್ರೀ ಎಚ್. ಕೆ. ವೀರಣ್ಣಗೌಡ.—1957ನೆ ಇಸವಿಯಲ್ಲಿ ಜುಲೈ ತಿಂಗಳಿನಲ್ಲಿ ಟೆಕ್ನಿಕಲ್ ಸ್ಯಾಂಕ್ಷನ್ ಕೊಟ್ಟಿದೆ.

ಶ್ರೀ ಡಿ. ದೇವರಾಜ ಅರಸ್.—ಹಾಗಿದ್ದ ಮೇಲೆ ಈ ರೀತಿಯಾಗಿ ವ್ಯತ್ಯಾಸ ಆಗುವುದಕ್ಕೆ ಕಾರಣವಿಲ್ಲ ಅಲ್ಲವೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ನನ್ನ ಹತ್ತಿರ ವಿವರಗಳಿಲ್ಲ. ಇರುವ ವಿಷಯ ಹೇಳುತ್ತಿದ್ದೇನೆ. ಯಾವ ಯಾವ ಬಾಬುಗಳಲ್ಲಿ ಹೆಚ್ಚಾಗಿದೆ ಎಂದು ಪರಿಶೀಲನೆ ಮಾಡಿ ಚೀಫ್ ಇಂಜಿನಿಯರು ರಿಪೋರ್ಟ್ ಕಳುಹಿಸುತ್ತಾರೆ. ಅವರ ರಿಪೋರ್ಟಿನ ಮೇಲೆ ಎಲ್ಲ ಅವಲಂಬಿಸುತ್ತದೆ.

Sri H. M. CHANNABASAPPA.—What was the difficulty for Government to order straightaway calling for re-tenders instead of giving discretion to the Chief Engineer?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದೇ ನ್ಯಾಯವಿ ಹೇಳಿರುವುದು. ಚೀಫ್ ಇಂಜಿನಿಯರಿಗೆ ಪುನಃ ಟೆಂಡರ್ ಕರೆಯಿರಿ ಎಂದು ಕೇಳಿದ್ದೇವೆ. 'Why not you call for re-tenders' ಎಂದು ಕೇಳಿದ್ದೇವೆ.

Sri H. M. CHANNABASAPPA.—May I take it, Sir, that there is no difference between the two—"call for tenders" and "why not you call for tenders"?

Sri H. K. VEERANNA GOWDH.—Both are same.

Sri J. B. MALLARADHYA.—Sir, have the Government any reason to believe that the two have combined and given the lowest tender and what is the reason for Government not accepting the lowest tender?

Sri H. K. VEERANNA GOWDH.—I have already said. The rates quoted are abnormally high. They are nearly 20 per cent higher than the schedule

rate. So Government have asked: 'why not you call for re-tender'.

Sri J. B. MALLARADHYA.—Is the Government willing to accept that tender if the Chief Engineer again sends it back and wants it to be accepted?

Sri H. K. VEERANNA GOWDH.—How can I answer questions with IF's and BUT's, Sir? I am awaiting the reply from the Chief Engineer.

Sri B. V. DESAI.—What is the estimated cost of the work?

Sri H. K. VEERANNA GOWDH.—4.5 lakhs.

ಶ್ರೀ ಬಿ. ವಿ. ದೇಸಾಯಿ.—ಸರ್ಕಾರದವರು ಈ ಕೆಲಸವನ್ನು ತಾವೇ ಮಾಡುವುದಕ್ಕೆ ಯೋಚನೆ ಮಾಡಬಹುದೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮಾಡಬಹುದು. ಅದಕ್ಕೆ ಆಕ್ಷೇಪಣೆ ಇಲ್ಲ.

ಶ್ರೀಮತಿ ಕೆಂಪಮ್ಮ.—ಈ ಕೆಲಸಕ್ಕೆ ಎಷ್ಟು ಹಣ ಖರ್ಚಾಗುತ್ತದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—4½ ಲಕ್ಷ ರೂಪಾಯಿ ಖರ್ಚಾಗುತ್ತದೆ.

Increment files pending in the Office of the Excise Commissioner.

Q.—2478. Sri N. BASVANT RAYA (Yadgiri).—

Will the Government be pleased to state:—

(*a*) whether it is a fact that numerous files are pending disposal in the office of the Excise Commissioner in regard to increments, leave and efficiency bar, pertaining to Excise Inspectors of Hyderadad Karnatak;

(*b*) if so, the reasons for not disposing the said cases for such a long time?

A.—Sri MOHAMED ALI (Minister for Excise and Rural Industries).—

(*a*) No file regarding increment or leave is pending. Regarding efficiency bar, two cases are pending.

(*b*) The reasons for the delay in the disposal are that in one case the service register of the official has not been received and in another case the receipt of the appeal file from the Board of Revenue, Andhra Pradesh, is awaited.

ಶ್ರೀ ಎಚ್. ಬನವಂತರಾಯ.—ಸರ್ವಿಸ್ ರಿಜಿಸ್ಟರು ತಲಪದೆ ಇರುವುದಕ್ಕೆ ಕಾರಣವೇನು ಮತ್ತು ಇದಕ್ಕೆ ಹೊಣೆಗಾರರು ಯಾರು?

*Sri MOHAMED ALI.—Sir, I have not followed the question.

Mr. SPEAKER.—He wants to know why there is delay and if there is delay, who is responsible for it.

Sri MOHAMED ALI.—In one case, the Service Register has been called for and in the other case, some files and papers from Andhra Pradesh Government have been called for.

ಶ್ರೀ ಎಚ್. ಬನವಂತರಾಯ.—ಸರ್ವಿಸ್ ರಿಜಿಸ್ಟರು ಬಂದಿಲ್ಲವೆಂದರೆ ಅದಕ್ಕೆ ಹೊಣೆಗಾರರು ಯಾರು?

ಅಧ್ಯಕ್ಷರು.—ಹೊಣೆಗಾರಿಕೆ ಪ್ರಶ್ನೆ ಇದರಲ್ಲಿ ಬರುವುದಿಲ್ಲ.

ಶ್ರೀ ಎನ್. ಶರಣಗೌಡ.—ಸರ್ವಿಸ್ ರಿಜಿಸ್ಟರ್ ಯಾರಿಂದ ಬಂದಿಲ್ಲ?

Sri MOHAMED ALI.—Service Register has been called for from the District Excise Officer.

ಶ್ರೀ ಎನ್. ಶರಣಗೌಡ.—ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರು ಅಲ್ಲದ್ದಾರೆ ಅಲ್ಲವೆ?

Sri MOHAMED ALI.—We have not received because they have not sent it.

ಶ್ರೀ ಎನ್. ಶರಣಗೌಡ.—ಸರ್ವಿಸ್ ರಿಜಿಸ್ಟರ್ ಕಳುಹಿಸಬೇಕು ಎಂದು ಹೇಳಿದ ತಾರೀಖು ಯಾವುದು?

Sri MOHAMED ALI.—A reminder has been sent.

Sri S. SHARAN GOWDA.—I want to know the date.

Sri MOHAMED ALI.—I have not got that detail with me.

ಶ್ರೀ ಎನ್. ಶರಣಗೌಡ.—1ನೆಯ ನವೆಂಬರ್ 1956 ನಂತರ ಕಳುಹಿಸಿದ್ದೀರೋ ಅಥವ ಇತ್ತೀಚೆಗೆ ಕಳುಹಿಸಿದ್ದೀರೋ?

Sri MOHAMED ALI.—Sir, it is quite clear that papers were called for after the Reorganisation of the State.

ಶ್ರೀ ಎನ್. ಶರಣಗೌಡ.—ರಿಮೈಂಡರ್ ಕಳುಹಿಸಿದ ತಾರೀಖು ಯಾವುದು?

Mr. SPEAKER.—Have you got the date of the reminder? He wants it.

Sri MOHAMED ALI.—That detail is not with me.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇನ್ನೊಂದು ಪ್ರಕರಣದಲ್ಲಿ ನಿಘಾನಬಾಗಿರುವುದಕ್ಕೆ ಕಾರಣ ಸಂಬಂಧಪಟ್ಟ ಅಧಿಕಾರಿಯ ಕಾಗದಪತ್ರ ಆಂಧ್ರಪ್ರದೇಶದ ರೆವಿನ್ಯೂ ಬೋರ್ಡಿನಲ್ಲಿದೆಯೆಂದು ಹೇಳಿದೆ. ಆಂಧ್ರ ಪ್ರದೇಶದ ರೆವಿನ್ಯೂ ಬೋರ್ಡಿಗೆ ಈ ಕಾಗದಪತ್ರಗಳು ಹೋಗುವುದಕ್ಕೆ ಕಾರಣವೇನು?

ಅಧ್ಯಕ್ಷರು.—(*a*) ಪ್ರಶ್ನೆಗೆ ಉತ್ತರ ನೋಡಿ. Increments, Leave ವಿಚಾರಗಳಲ್ಲಿ ಯಾವುದೂ pending ನಲ್ಲಿಲ್ಲವೆಂದು ಹೇಳಿದ್ದಾರೆ.